**ದಿನಾಂಕಃ 10.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ. ಜೆ.ಆರ್.ಎಂ., ಆರೋಪಿ ಪರ ವಕೀಲರಿಂದಃ**

**4.** ಈ ಪ್ರಕರಣದ ಚೆಕ್ ನಂಬರ್ ನೋಡಿ ಹೇಳುತ್ತೇನೆ, ಆದರೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಚೆಕ್ಕು ಇರುತ್ತದೆ. ಈ ಪ್ರಕರಣದಲ್ಲಿ 2 ಚೆಕ್ಕು ಇರುತ್ತದೆ. ಈ ಪ್ರಕರಣದಲ್ಲಿ ರೂ.1,50,000/-ಗಳ ಎರಡು ಚೆಕ್ಕು ಇರುತ್ತದೆ. ಈ ಚೆಕ್ಕುಗಳು 2021 ರ ಚೆಕ್ಕುಗಳು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ 2023 ರ ಚೆಕ್ಕು ಇರುತ್ತದೆ. ದಿ.24.02.2020 ರಂದು ಸಿಂಡಿಕೇಟ್ ಬ್ಯಾಂಕ್, ಚಾಮರಾಜಪೇಟೆ ಶಾಖೆಯ ರೂ.15 ಲಕ್ಷ ರೂಪಾಯಿಯ ಚೆಕ್ಕನ್ನು ಕೊಟ್ಟಿದ್ದೇವೆ. ನಮ್ಮ ಮತ್ತು ಆರೋಪಿಯ ನಡುವೆ ವ್ಯವಹಾರದ ದೃಷ್ಟಿಯಿಂದ ಸಂಬಂಧ ಮುಂಚೆ ಮತ್ತು ಈಗಲೂ ಚೆನ್ನಾಗಿದೆ. ಸೆಪ್ಟೆಂಬರ್-ಅಕ್ಟೋಬರ್ 2021 ರಲ್ಲಿ ನಾನು, ಆರೋಪಿ ಮತ್ತು ಇನ್ನೊಬ್ಬ ವ್ಯಕ್ತಿ Linc field Management Services ಎಂಬ ಕಂಪನಿ ಪ್ರಾರಂಭ ಮಾಡುವ ಉದ್ದೇಶದಿಂದ ಮತ್ತು ಅದರ ಹೂಡಿಕೆಗೆ ರೂ.15 ಲಕ್ಷ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಹೂಡಿಕೆ ಮಾಡಿದ ನಂತರ ಕೊರೋನಾ ಜಾಸ್ತಿಯಾಗಿದ್ದರಿಂದ ನಾನು ಹೂಡಿಕೆ ಮಾಡಿದ ಹಣವನ್ನು ವಾಪಸ್ ನೀಡುವಂತೆ ಮಾರನೆಯ ದಿನ ಕೇಳಿದೆ ಎಂದರೆ ಸರಿಯಲ್ಲ. ದಿ.25.02.2020 ರಂದು ನಾನು ರೂ.15 ಲಕ್ಷ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಿ.26.02.2020 ರಂದು ನಾನು ಡಿಮಾಂಡ್ ಮಾಡಿದ್ದರಿಂದ ಆರೋಪಿ ರೂ.10 ಲಕ್ಷಗಳನ್ನು ಡ್ರಾ ಮಾಡಿ ನನಗೆ ಕೊಟ್ಟಿದ್ದಾರೆ

**ಪಿಡಬ್ಲೂ.1:ಶ್ರೀ. ವಿ. ರಾಧಕೃಷ್ಣನ್.,**

ಎಂದರೆ ಸರಿಯಲ್ಲ. ಆರೋಪಿತಮೊದಲೇ ಕೊಟ್ಟಂತಹ ಚೆಕ್ಕನ್ನು ಬಳಸಿಕೊಂಡು ಅದಕ್ಕೆ ರೂ.1,50,000/- ನಮೂದು ಮಾಡಿ ಬ್ಯಾಂಕಿಗೆ ಹಾಕಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಹತ್ತಿರ ಯಾವುದೇ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಆಗಾಗ ರೂ.50 ಸಾವಿರ ನನಗೆ ವಾಪಸ್ ಕೊಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಆರೋಪಿ ರೂ.2 ಲಕ್ಷ ಕೊಟ್ಟಿದ್ದಾನೆ ಎಂದು ಹೇಳುವ ಮೊತ್ತ ಬಡ್ಡಿ ಮೊತ್ತವಲ್ಲ ಅದು ಸಾಲದ ಮೊತ್ತ ಎಂದರೆ ಸರಿಯಲ್ಲ. ಆರೋಪಿ ಕೊಟ್ಟ ಚೆಕ್ಕುಗಳನ್ನು ದುರ್ಬಳಕೆ ಮಾಡಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶಂಭುಲಿಂಗಯ್ಯ ಮೂಡಿಮಠ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.